ಮೊದಲೇ ಮಹತ್ವದ ಕೃತಿಗಳನ್ನು ಸುಟ್ಟು ಹಾಕಿದಂತಾಗುತ್ತದೆ. ನನ್ನಿಂದ ಮಹತ್ವದ ಕೃತಿಗಳು ಬರದೇ ಹೋದರೆ; ನಾನು 'ರಾಸಾಅ' ಬಹುಮಾನ, 'ಕೇಂಸಾಅ' ಪ್ರಶಸ್ತಿ ತೆಗೆದುಕೊಳ್ಳುವುದಾದರೂ ಹೇಗೆ? ಇವು ಬಂದರೆ ಇಪ್ಪತ್ತೈದು ಸಾವಿರವೋ, ಐವತ್ತು ಸಾವಿರವೋ ಹಣ ಬರುತ್ತದೆ. ಅದರಿಂದ ನಿನಗೆ ಒಂದು ತೊಲವೋ, ಅರ್ಧ ತೊಲವೋ ಬಂಗಾರವನ್ನು ತಗೊಳ್ಳೋಣ ಅಂತ ನಾನು ಮಾಡಿದ್ದೀನಿ' ಅಂದದ್ದೇ ತಡಾ, 'ಇದನ್ನ ಮೊದಲ ಹೇಳಬಾರದೇನ್ರಿ...' ಅಂದುಬಿಟ್ಟಳು. ಅಲ್ಲಿಂದ ನನ್ನ ಭ್ರೂಣಗಳ ಹತ್ಯೆ ಒಂದಷ್ಟು ನಿಂತಿದೆ ಅಂತ ಹೇಳಬಹುದು.

ಖರೆ ಹೇಳಬೇಕಂದರ... ಈ ಪುಸ್ತಕ ಬಹುಮಾನಗಳ ಮೊತ್ತ, ಆ ಮೂಲಕ ಬಂಗಾರ ತಗೊಳ್ಳುವ ಆಸೆಯನ್ನು ನನ್ನಾಕೆಗೆ ಹಚ್ಚಿದ್ದರ ಹಿಂದೆ ನನ್ನದೂ ಒಂದು ಒಳ ಆಸೆ ಐತಿ. ನನ್ನದು ಬಂಗಾರದ ಮೇಲಂತೂ ಅಲ್ಲ ಬಿಡ್ರಿ. ನಂದೇನಿದ್ದರೂ ಬರೀ ಬಹುಮಾನದ ಮೇಲೆ ಮಾತ್ರ. ಹಿಂಗ್ ಅಂದ ಕೂಡಲೇ ನಾನು, 'ಬಹುಮಾನ, ಪ್ರಶಸ್ತಿಗಾಗಿ ಹಲಬುವವ...' ಅಂತ ಅಂದುಕೊಳ್ಳಬ್ಯಾಡ್ರಿ. ಇದರ ಹಿಂದಿನ ನನ್ನ ನಂಬಿಕೆ ಏನಪಾ ಅಂದರ... ಬಹುಮಾನ, ಪ್ರಶಸ್ತಿ ಪಡೆದ ಕೃತಿಗಳನ್ನು ಹೆಚ್ಚು ಜನ ಗಮನಿಸ್ತಾರ ಮತ್ತು ಓದ್ತಾರ ಅನ್ನೋದು ಆಗೇತಿ. ಆ ಮೂಲಕ ನಾನು ಬಹಳಷ್ಟು ಜನರನ್ನು ಮುಟ್ಟಬಹುದು ಅನ್ನೋದು ನನ್ನ ಮಹದಾಸೆ, ದೂರದ ಆಸೆ ಆಗೇತಿ ಅಷ್ಟೇ.

ಈ ನನ್ನ ಆಸೆಯ ಜೊತೆಗೆ ಸೇರಿಕೊಂಡ ಇನ್ನೊಂದು ಬಹಳ ಹರಿತವಾದ ಅಸ್ತ್ರ ಏನೂ ಅಂದರೆ, ನನ್ನ ಸಮಕಾಲೀನನವನೇ ಆದ ಲೇಖಕ ಕಾಮೇಶಿ ಕದಂ ಹಾಕಿದ ಸವಾಲು. ಅವನು ಮೊನ್ನೆ ಮಲ್ಲೇಶಿಗೆ ಭೇಟಿಯಾದಾಗ ನನ್ನ ಕುರಿತು, 'ಏನಪಾ ನಿನ್ನ ಗೆಳೆಯ ಭಾರಿ ಮಾತಾಡ್ತಾನ, ಅಂವಗ ಒಂದಾದ್ರೂ 'ರಾಸಾಅ' ಬಹುಮಾನ ಬಂದಿದೆ ಏನು? ನನಗ ಮೂರು ಬಂದಾವು! ಹೇಳಂವಗ' ಅಂದಿದ್ದನಂತೆ. ಇದೇ ಕಾಮೇಶಿ ತಿಂಗಳ ಹಿಂದೆ ಕಾರ್ಯಕ್ರಮವೊಂದರಲ್ಲಿ ನನಗೆ ಸಿಕ್ಕಾಗ ನನ್ನ 'ಒಂದು ಹಿಡಿ ಹುಲ್ಲು' ಕೃತಿಯ ಕುರಿತು ಹಾಡಿ ಹೊಗಳಿ, ಅದಕ್ಕೆ ಕೇಂಸಾಅ ಬಹುಮಾನ ಬರಬೇಕು ಅಂದಿದ್ದ. ಅಂಥವನು ನನ್ನನ್ನು ಹೀಗೆ ಹೀಯಾಳಿಸಿದನಲ್ಲ... ಅಂತ ನಾನು ಭಯಂಕರ ತಳಮಳಿಸಿದ್ದೆ. ಅಲ್ಲಿಂದಲೇ ನಾನೂ ಒಂದಾದರೂ 'ರಾಸಾಅ' ಬಹುಮಾನ ಪಡೆದುಕೊಳ್ಳಲೇಬೇಕೆಂದು ಪಣ ತೊಟ್ಟಿದ್ದು. ಈ ಕಾರಣಕ್ಕಾಗಿಯೇ ನನ್ನಲ್ಲಿ ಹುಟ್ಟುವ (ಹೊಳೆಯುವ) ಭ್ರೂಣಗಳನ್ನು ಒಂದೂ ಬಿಡದೇ ಜತನ ಮಾಡಬೇಕೆಂದು ಒಂದೇ ಸವನೇ ಪರಿತಪಿಸುತ್ತಿದ್ದೇನೆ. ನಾನು ಮೊದಲೇ ಹೇಳಿದೆನಲ್ಲ... 'ಸೋಮಾರಿತನಕ್ಕೆ ನಾನು ಬಹುದೊಡ್ಡ ಆಶ್ರಯದಾತ' ಎಂದು. ಈಗ ಕಾಮೇಶೀ ಕದಂ ಹಾಕಿದ ಛಲದಿಂದ ನನ್ನಲ್ಲಿಯ ಸೋಮಾರಿತನ ನಿಧಾನಕ್ಕೆ ಜಾಗ ಖಾಲಿ ಮಾಡುತ್ತಿದೆ. ಅದಕ್ಕಾಗಿ ನಾನು ಖ್ಯಾತ ಸಾಹಿತಿ ಕಾಮೇಶಿಯವರಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಸಹನೆಯಿಂದ ಇದನ್ನು ಓದಿದ ತಮಗೂ ಕೂಡಾ.

**ಲಕ್ಷ್ಮಣ ಬಾದಾಮಿ**

ಬಾಗಲಕೋಟೆ ಜಿಲ್ಲೆಯ ಸಿರೂರನವರು. ರಾಯಚೂರು ಜಿಲ್ಲೆಯ ಕುರ್ಕುಂಡದಲ್ಲಿ ಚಿತ್ರಕಲಾ ಶಿಕ್ಷಕರಾಗಿದ್ದಾರೆ. ಪ್ರಕಟಿತ ಕೃತಿಗಳು: 'ಭವ', 'ಬೇರು ಮತ್ತು ಬೆವರು', 'ಒಂದು ಚಿಟಿಕೆ ಮಣ್ಣು' (ಕಥಾಸಂಕಲನಗಳು), 'ಮನುಷ್ಯರು ಬೇಕಾಗಿದ್ದಾರೆ' (ಕವನ ಸಂಕಲನ) 'ರೂಪ ನಿರೂಪ' (ಪೇಂಟಿಂಗ್ಸಗಳ ಕುರಿತು) 'ಬಿಸಿಲ ಸೀಮೆಯ ಜಾನಪದ ಸಿರಿ' (ಸಂಪಾದನೆ).